**ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ.**

**ಸಿ ಸಿ ನಂ. ಃ 324/2019** **ಪಿಡಬ್ಲ್ಯೂ ಃ1**

**ಸಿಡಬ್ಲ್ಯೂ ಃ1**

**ಹೆಸರು** ಃ ಶಶಿಕಲಾ

ಗಂಡನ **ಹೆಸರು** ಃ ಶ್ರೀಧರ

**ವಯಸ್ಸು** ಃ **54 ವರ್ಷ**

**ಉದ್ಯೋಗ** ಃ ಗೃಹಿಣಿ

**ವಾಸಸ್ಥಳ** ಃ ಧರ್ಮಕ್ಕಿ ಹೌಸ್ ಕೈರಂಗಳ ಗ್ರಾಮ ಉಳ್ಳಾಲ

ದಿಃ **25.07.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಈಗ ಉಡುಪಿಯಲ್ಲಿ ವಾಸ ಇದ್ದೇನೆ. ಈ ಘಟನೆ ಆಗುವ ಸಮಯದಲ್ಲಿ ಚಿಕ್ಕಮಗಳೂರಿನಲ್ಲಿ ವಾಸವಿದ್ದೆ. ನಮ್ಮ ಮನೆಯ ಎದುರಿನ ಬಾಗಿಲನ್ನು ಮುರಿದು ತೆರೆದು ಕಳ್ಳತನಕ್ಕೆ ಪ್ರಯತ್ನ ಮಾಡಿದ್ದರು. ಮನೆಯ ಯಾವುದೇ ವಸ್ತುಗಳು ಕಳ್ಳತನವಾಗಿರಲಿಲ್ಲ, ಆದರೆ ಮನೆಯ ಒಳಗಡೆ ನುಗ್ಗಿ ಬೀರುವಿನಲ್ಲಿ ಇದ್ದ ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಯಾಗಿತ್ತು. ಸದರಿ ವಿಚಾರ ನನಗೆ ದಿ **09.02.2019**ರಂದು ಗೊತ್ತಾಯಿತು. ನಂತರ ನಾನು ಚಿಕ್ಕಮಗಳೂರಿನಿಂದ ದಿನಾಂಕ **10.02.2019**ರಂದು ಬಂದು ದಿನಾಂಕ **11.02.2019**ರಂದು ದೂರನ್ನು ಕೊಣಾಜೆ ಪೊಲೀಸ್ ಠಾಣೆಗೆ ಹೋಗಿ ಕೊಟ್ಟಿದ್ದೆ. ಮನೆಯಲ್ಲಿ ಯಾರೂ ಇರಲಿಲ್ಲ, ಬೀಗ ಹಾಕಿತ್ತು. ಆದರೆ ನಾನು ಒಮ್ಮೊಮ್ಮೆ ಬರುತ್ತಿದ್ದೆ. ಕೆಲಸದಾಳು ಒಬ್ಬರು ಇದ್ದು ಪ್ರತೀ ದಿನ ಬಂದು ಹೋಗುತ್ತಿದ್ದರು. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ-**1** ಎಂದು ಸಾಕ್ಷಿಯ ಸಹಿಯನ್ನು ನಿಪಿ-**1**ಎ ಎಂದು ಗುರುತಿಸಲಾಯಿತು.

ಕೊಣಾಜೆ ಪೊಲೀಸ್ ಠಾಣೆಯವರು ಅದೇ ದಿನ ಮದ್ಯಾಹ್ನ ನಮ್ಮ ಮನೆಗೆ ಬಂದು ಮದ್ಯಾಹ್ನ **04.30** ರಿಂದ **05.00** ಗಂಟೆಯವರೆಗೆ ಮಹಜರು ಮಾಡಿದ್ದರು. ತಕ್ಷೀರು ಸ್ಥಳವನ್ನು ನಾನು ಪೊಲೀಸರಿಗೆ

ತೋರಿಸಿದ್ದೆ. ಆಗ ಚಾಸಾ–3 ಗೋಪಾಲಕೃಷ್ಣ ಭಟ್ ಮತ್ತು ಚಾಸಾ-4 ಕಮಲ ರವರು ಪಂಚರಾಗಿ ಹಾಜರಿದ್ದರು. ಪೊಲೀಸರು ಮಾಡಿದ ಮಹಜರಿಗೆ ನಾನು ಸ್ಥಳದಲ್ಲ್ ಸಹಿ ಹಾಕಿದ್ದೆ. ಸದರಿ ಮಹಜರನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-2 ಎಂದು ಸಾಕ್ಷಿ ಸಹಿ ನಿಪಿ-2ಎ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ</u>

ಆರೋಪಿತನು ತಲೆಮರಿಸಿಕೊಂಡಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

**ನ ಉ ರೀ ಬ ನ್ಯಾ ಬೆ ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಹಿರಿಯಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**